2002-03ನೇ ಸಾಲಿನಲ್ಲಿ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಸರಬರಾಜು ಮಾಡಲು ಆಗಿರುವ ವಿಳಂಬಕ್ಕೆ ಸಂಸ್ಥೆಯವರು ಈ ಕೆಳಕಂಡ ಕಾರಣಗಳನ್ನು ನೀಡಿರುತ್ತಾರೆ:

1) ಇಲಾಖೆಯ ಸಂಸ್ಥೆಗಳ ಬೇಡಿಕೆಯ ಪ್ರಕಾರ ವಿವಿಧ ಬಣ್ಣದ ಹಾಗೂ ವಿವಿಧ ವಿನ್ಯಾಸದ ಬಟ್ಟೆಗಳನ್ನು ತಯಾರಿಸಲು ತುಂಬಾ ತೊಡಕುಗಳಿದ್ದು ವಿಳಂಬಕ್ಕೆ ಕಾರಣವಾಗಿರುತ್ತದೆ.

2) ಸಮವಸ್ತ್ರಗಳಿಗೆ ಅವಶ್ಯವಿರುವ ಹತ್ತಿ ನೂಲು ಹಾಗೂ ಇನ್ನಿತರ ಕಚ್ಚಾ ಸಾಮಗ್ರಿಗಳ ಬೆಲೆಯು ಬರ ಪರಿಸ್ಥಿತಿಯಿಂದಾಗಿ ಹೆಚ್ಚಳವಾಗಿರುತ್ತದೆ.

3. ಸುಳ್ಯಾ ತಾಲ್ಲೂಕಿನಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ಸಮವಸ್ತ್ರವನ್ನು ವಿತರಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ವರ್ಗಗಳ ಹಾಸ್ಟೆಲ್ ಹಾಗೂ ಆಶ್ರಮ ಶಾಲೆಗಳ ನಿರ್ವಹಣಾ ವೆಚ್ಚ

1556 (2062) ಶ್ರೀ ಎಸ್. ಅಂಗಾರ (ಸೂಳ್ಯ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ವರ್ಗಗಳ ಹಾಸ್ಟೆಲ್ ಹಾಗೂ ಆಶ್ರಮ ಶಾಲೆಗಳಿಗೆ 2002-03ರಲ್ಲಿ ಎಷ್ಟು ನಿರ್ವಹಣೆ ವೆಚ್ಚ ನೀಡಬೇಕಾಗಿತ್ತು; ಎಷ್ಟು ನೀಡಿದೆ?

ಆ) ನೀಡದೇ ಇದ್ದಲ್ಲಿ ಯಾವಾಗ ನೀಡಲಾಗುವುದು?

ಇ) ಸುಳ್ಯ ತಾಲ್ಲೂಕಿಗೆ ಎಷ್ಟು ನೀಡಬೇಕಾಗಿದೆ; ಯಾವಾಗ ನೀಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) (ರೂ. ಲಕ್ಷಗಳಲ್ಲಿ)

	ಆಶ್ರಮ ಶಾಲೆಗೆ	ಪ.ವಿದ್ಯಾರ್ಥಿ ನಿಲಯಕ್ಕೆ
ಬಿಡುಗಡೆ ಮಾಡಬೇಕಾದ ಮೊತ್ತ	41.56	15.58
ಬಿಡುಗಡೆ ಮಾಡಲಾಗಿರುವ ಮೊತ್ತ	30.90	8.11

ಆ) ಇನ್ನೂ ನೀಡಬೇಕಾದ ಬಾಕಿ ಅನುದಾನದ ಬಗ್ಗೆ ಜಿಲ್ಲಾ ಪಂಚಾಯತಿಯಿಂದ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸೂಳ್ಯ ತಾಲ್ಲೂಕಿಗೆ ರೂ. 10.19 ಲಕ್ಷ ನೀಡಬೇಕಾಗಿದ್ದು, ಈಗಾಗಲೇ ರೂ. 9.13 ಲಕ್ಷಗಳನ್ನು ನೀಡಲಾಗಿದೆ. ಇನ್ನೂ ಬಾಕಿ ರೂ. 1.06 ಲಕ್ಷಗಳನ್ನು ಜಿಲ್ಲಾ ಪಂಚಾಯತಿಯಿಂದ ಬಿಡುಗಡೆ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯ

1557 (2031) ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ನೀಡಬೇಕಾಗಿರುವ ಸಹಾಯಧನ ಎಷ್ಟು? ಬಾಕಿ ಇದೆ. ಯಾವ ಸಾಲಿನಿಂದ ಬಾಕಿ ಇವೆ: (ಪ್ರತಿ ಸಾಲಿನ ಬಾಕಿ ಹಣದ ವಿವರ ಒದಗಿಸುವುದು)

ಆ) ಈ ಬಾಕಿ ಹಣ ಪಾವತಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?